ಇಪ್ಪತ್ತೊಂದನೆಯ ಶತಮಾನದಲ್ಲಿ ನಡೆಯದಿರುವ ಸಂಗತಿಯೇ ಇಲ್ಲ! ತಂತ್ರಜ್ಞಾನ ಪೂರ್ಣವಾಗಿ ವಿಕಸಿತವಾಗಿದೆ! ಮನುಷ್ಯರಿಗೆ ಸಾಧ್ಯವಾಗದೆ ಇರವುದೇನೂ ಇಲ್ಲ! ತಾನೇ ತನ್ನ ಕಾಲೇಜಿನ ಪ್ರಾಜೆಕ್ಟಿಗಾಗಿ ಮಾನವರ ಮಾತಿಗೆ ಸ್ಪಂದಿಸಿ ಕೈಕಾಲು ಆಡಿಸುವ ಮಿನಿ ರೊಬೊ ತಯಾರಿಸಿರಲಿಲ್ಲವೆ? ಅದು ಐದು ವರ್ಷಗಳ ಹಿಂದೆ! ಅದೂ ಕನಿಷ್ಠ ಮೂಲಭೂತ ಸೌಕರ್ಯಗಳಿದ್ದ ಕಡೆ! ಇದು... ಅಮೆರಿಕ, ತಂತ್ರಜ್ಞಾನ ಮತ್ತು ವಿಜ್ಞಾನದಲ್ಲಿ ಮುಂದುವರಿದ ದೇಶ. ಇಲ್ಲಿ ಸಾಧ್ಯವಾಗದಿರುವುದು ಏನೂ ಇಲ್ಲ!!

ಆ ರೊಬೊಗೆ... ಇಲ್ಲ ಅದನ್ನು ರೊಬೊ ಎನ್ನುವುದು ಸಾಧ್ಯವಿಲ್ಲ! ಆಕೆ, ಆ ಸುಂದರಿ ಮುಂದಿನ ಹತ್ತು ನಿಮಿಷಗಳು ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದಳು. ಮನು ಎಚ್ಚರಿಕೆಯಿಂದ ಅವುಗಳಿಗೆ ಉತ್ತರ ನೀಡುತ್ತಿದ್ದ. ತಾನು ನೀಡುವ ಮಾಹಿತಿಯ ಮೇರೆಗೇ ಆಕೆ ವರ್ತಿಸುವಳೆಂದು ಅವನಿಗೆ ತಿಳಿದಿತ್ತು.

ಇಪ್ಪತ್ತು ನಿಮಿಷಗಳ ನಂತರ ಆಕೆ ಪರಿಪೂರ್ಣವಾಗಿ ಹೆಣ್ಣೇ ಆಗಿದ್ದಳು. ಮನುವಿನ ಜೊತೆ ಮಾತಾಡುವಾಗ ನಗುತ್ತಿದ್ದಳು, ಹುಬ್ಬು ಹಾರಿಸುತ್ತಿದ್ದಳು, ಮುಖದಲ್ಲಿ ಪ್ರಶ್ನಾರ್ಥಕ ಚಿನ್ಹೆಗಳನ್ನು ವ್ಯಕ್ತಪಡಿಸುತ್ತಿದ್ದಳು. ಕಣ್ಣಿನಲ್ಲೂ ಭಾವನೆ ವ್ಯಕ್ತಪಡಿಸುತ್ತಿದ್ದಳು.

'ನನ್ನನ್ನು ಏನೆಂದು ಕರೆಯುತ್ತೀರಿ? ಆಕೆಯ ಪ್ರಶ್ನೆಗೆ ಮನು ಬೆದರಿದ. ಕಾರಣ ಒಂದು ವ್ಯಾವಹಾರಿಕ ಹೆಸರು ಕೊಡಲೋ ಇಲ್ಲ, ತನ್ನ ಕಲ್ಪನೆಯಲ್ಲಿದ್ದ ಸುಂದರಿಯ ಹೆಸರು ಕೊಡಲೋ?... ಆಕೆಗೊಂದು ನಂಬರು ಕೊಟ್ಟರೂ ನಡೆಯುತ್ತದೆ. ಆದರೆ ಅದು ಅಮಾನವೀಯವಾಗುತ್ತದೆ.

'ಕಮಲಾ' ಆಕೆಯ ಕಮಲದ ಕಣ್ಣುಗಳನ್ನು ನೋಡುತ್ತಾ ಅವನಿಗರಿವಿಲ್ಲದೆಯೇ ಹೇಳಿಬಿಟ್ಟ!

'ಸುಂದರವಾದ ಹೆಸರು, ಧನ್ಯವಾದಗಳು. ಒಮ್ಮೆ ಈ ಮನೆಯ ಪರಿಚಯ ಮಾಡಿಸುತ್ತೀರಾ?'

'ಓ... ಶೂರ್... ಬನ್ನಿ...'

'ಐ ಯಾಮ್ ಎ ಮಷಿನ್... ನನ್ನನ್ನು ಏಕವಚನದಿಂದಲೂ ಕರೆಯಬಹುದು.'

ಮನುವಿಗೆ ಧೈರ್ಯ ಬಂತು. ಹೌದು, ತನ್ನೆದುರಿಗಿರುವುದು ಒಂದು ಯಂತ್ರ. ಮುಂದುವರಿದ ಕಂಪ್ಯೂಟರು. ಅದಕ್ಕೆ ತಾನೇಕೆ ಅಧೀರನಾಗಬೇಕು. ಅದು ತಾನು ಹೇಳಿದಂತೆ ಕೇಳುತ್ತದೆ. ಅದಕ್ಕೇ ಅಲ್ಲವೆ ಅದನ್ನು ಕೊಂಡುಕೊಂಡಿರುವುದು. ಅದೂ ಎಷ್ಟು? ಹತ್ತು ಸಾವಿರ ಡಾಲರ್!

ಅಮೆರಿಕ ಸೇರಿ ಆರು ವರ್ಷವಾಗಿತ್ತು. ಒಂಟಿ ಜೀವನ ಸಾಕಾಗಿತ್ತು! ಹಸಿಬಿಸಿಯಾಗಿ ಬೇಯಿಸಿಕೊಂಡೋ, ಬರ್ಗರು, ಸ್ಯಾಂಡ್ವಿಚ್, ಪಿಜ್ಜಾಗಳನ್ನು ತಿಂದು ನಾಲಿಗೆ ಜಡ್ಡು ಹಿಡಿದಿತ್ತು. ತನಗೆ ಸಾಂಗತ್ಯ ಒದಗಿಸಿಕೊಡುವ, ಒಂಟಿತನ ನೀಗುವ, ರುಚಿರುಚಿಯಾದ ಸ್ವದೇಶೀ ಆಹಾರ ತಯಾರಿಸಿಕೊಡುವ ಸಂಗಾತಿಯ ಬಗೆಗೆ ಯೋಚಿಸುತ್ತಿದ್ದ. ಮದುವೆ ಇನ್ನೂ ದೂರವಿತ್ತು. ಸ್ವದೇಶದಲ್ಲಿ ಮದುವೆಗೆ ಬೆಳೆದಿದ್ದ ತಂಗಿಯಿದ್ದಳು. ಈ ಸಂದರ್ಭದಲ್ಲಿ ಏನು ಮಾಡಬಹುದು? ಹೀಗೆ ಯೋಚಿಸುತ್ತಿದ್ದಾಗಲೇ ಆ ರೊಬೊ ಕಂಪೆನಿಯ ಸೇಲ್ಸ್‌ಮನ್ ತಾನು ಕೆಲಸ ಮಾಡುತ್ತಿದ್ದ ರಿಸರ್ಚ್ ಸೆಂಟರಿಗೆ ಬಂದು ಈ ಹೊಸ ರೊಬೊ ಬಗ್ಗೆ ಬ್ರೋಶರ್ ನೀಡಿದ್ದ. ತಕ್ಷಣವೇ ಮನು ಆರ್ಡರ್ ನೀಡಿದ್ದ. ಸ್ನೇಹಿತರೆಲ್ಲಾ ಗೇಲಿ ಮಾಡಿದ್ದರು! ಅಷ್ಟು ಹಣ ಖರ್ಚು ಮಾಡುವಂತಿದ್ದರೆ ಮದುವೆಯನ್ನೇ ಆಗಬಹುದು ಎಂದಿದ್ದರು. ಅದಾವುದಕ್ಕೂ ಮನು ತಲೆಕೆಡಿಸಿಕೊಂಡಿರಲಿಲ್ಲ.

'ನಿಮಗೆ ಸ್ಟ್ಯಾಂಡರ್ಡ್ ಮಾಡಲ್ ಬೇಕೋ ಇಲ್ಲಾ ವಿಶೇಷವಾಗಿ ನಿಮ್ಮ ಅಭಿರುಚಿಗೆ